ದಿಃ24.08.2022 OS No.45/2018 PW-1

ದಿಃ24.08.2022 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಸ್ ಎಸ್ ವಕೀಲರಿಂದ

ಈ ದಾವೆಯನ್ನು ತಯಾರು ಮಾಡಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ವಾದ ಪತ್ರದ ಸಂಗತಿಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಗುಡಿಸಲನ್ನು ಖಾಲಿ ಮಾಡುವಂತೆ ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಗುಡಿಸಲಿನಲ್ಲಿ ಪ್ರತಿವಾದಿ ವಾಸವಿರುತ್ತಾರೆ, ಅವರಿಗೆ ನಾನು 6 ತಿಂಗಳ ಅವಧಿಗೆ ಬಾಡಿಗೆ ಕೊಟ್ಟಿದ್ದೆ. ಈ ಸಂಬಂಧವಾಗಿ ಬಾಡಿಗೆ ಕರಾರು ಪತ್ರ ಆಗಿರುವುದಿಲ್ಲ. ಬಾಡಿಗೆ ಪಾವತಿ ಮಾಡಿದ ಬಗ್ಗೆ ರಶೀತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರ ಎಂದರೆ ಅವರು ಬಾಡಿಗೆ ಪಾವತಿ ಮಾಡಿರುವುದಿಲ್ಲ. ನಾನು ಪ್ರತಿವಾದಿಗೆ ವಕೀಲರ ಮೂಲಕ ನೋಟೀಸು ನೀಡಿದ್ದು, ಅದನ್ನು ತಿರಸ್ಕರಿಸಿರುತ್ತಾರೆ. ಸದರಿ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ನೋಟೀಸನ್ನು 2018 ರಲ್ಲಿ ಕೊಟ್ಟಿದ್ದೆ. ನಾನು 2017 ರಲ್ಲಿ ದಾವ ಸ್ವತ್ತನ್ನು ಪ್ರತಿವಾದಿಗೆ ಬಾಡಿಗೆಗೆ ಕೊಟ್ಟಿದ್ದೆ. ಆ ರೀತಿ 2017 ರಲ್ಲಿ ಬಾಡಿಗೆಗೆ ಕೊಟ್ಟಿದ್ದ ಬಗ್ಗೆ ಮತ್ತು 2018 ರಲ್ಲಿ ನೋಟೀಸು ನೀಡಿದ್ದ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುತ್ತೇನೆ.

ದಾವ ಸ್ವತ್ತಿನ ಸರ್ವೇ ನಂ.9 ಆಗಿರುತ್ತದೆ.ದಾವ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಚಿನ್ನಮ್ಮ ಮತ್ತು ರಾಮಣ್ಣ ರವರ ನಿವೇಶನ, ಪಶ್ಚಿಮಕ್ಕೆ ಜವರಯ್ಯ ಮತ್ತು ದಾಸಯ್ಯರವರ ನಿವೇಶನ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಚಿಕ್ಕಮರಿಯಯ್ಯ ಮತ್ತು ಮುತ್ತಮ್ಮ ರವರ ನಿವೇಶನ ಇರುತ್ತದೆ. ಈ ಚೆಕ್ಕುಬಂದಿಯ ಆಸ್ತಿ ಮೂಲತಃ ಮುತ್ತಯ್ಯರವರಿಗೆ ಸೇರಿದ್ದಾಗಿರುತ್ತದೆ. ಸದರಿ ಮುತ್ತಯ್ಯರವರಿಗೂ ನಮಗೂ ಸಂಬಂಧ ಇರುವುದಿಲ್ಲ. ಮುತ್ತಯ್ಯರವರು ಛಾಪಕಾಗದದಲ್ಲಿ ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಳ್ಳುವಂತೆ ನಮಗೆ ಬರೆದುಕೊಟ್ಟಿರುತ್ತಾರೆ. ಸದರಿ ಅವಧಿಯಲ್ಲಿ ಮುತ್ತಯ್ಯರವರ ಹೆಸರಿನಲ್ಲಿ ಖಾತೆ ಇರಲಿಲ್ಲ. ಮುತ್ತಯ್ಯರವರಿಂದ ನಾನು

ಹಕ್ಕುಪತ್ರವನ್ನು ಸಹ ಪಡೆದುಕೊಂಡಿರುತ್ತೇನೆ. ಸದರಿ ಹಕ್ಕುಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಅದು ಕಳೆದುಹೋಗಿರುತ್ತದೆ. ನನಗೆ ಮುತ್ತಯ್ಯರವರು ದಾಖಲೆ ಬರೆದುಕೊಟ್ಟಾಗ ಗ್ರಾಮಸ್ಥರಾದ ಚಿಕ್ಕಣ್ಣ ಮತ್ತು ದೊಡ್ಡಣ್ಣ ಎಂಬುವವರು ಇದ್ದರು.

ಪ್ರತಿವಾದಿಗೆ ದಾವಾ ಸ್ವತ್ತಿನ ಗುಡಿಸಲನ್ನು ಹೊರತುಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ವಾಸ ಮಾಡುವ ಗುಡಿಸಲಿನ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನನಗೆ ಕಮಲಮ್ಮ ಎಂಬುವವರು ಗೊತ್ತು. ದಾವಾ ಸ್ವತ್ತು ಹೊರತುಪಡಿಸಿ ನನಗೆ ಒಂದು ಸೀಟಿನ ಮನೆ ಇರುತ್ತದೆ ಎಂದರೆ ಸರಿ. ಸದರಿ ಈ ಮೇಲೆ ಹೇಳಿದ ಕಮಲಮ್ಮ ರವರ ಮನೆಯ ಹಿಂಭಾಗದಲ್ಲಿ ನನ್ನ ಸೀಟಿನ ಮನೆ ಇರುತ್ತದೆ ಎಂದರೆ ಸರಿ. ಸದರಿ ಸೀಟಿನ ಮನೆಯ ಖಾತೆಯು ನನ್ನ ಪತ್ನಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯು ವಾಸ ಮಾಡುವ ಗುಡಿಸಲಿನ ದಕ್ಷಿಣ ದಿಕ್ಕಿಗೆ ಕಮಲಮ್ಮರವರ ಮನೆ ಇರುತ್ತದೆ ಎಂದರೆ ಸರಿ.

ದಿ 15-05-1992 ರಂದು ಪ್ರತಿವಾದಿಯು ತಾನು ವಾಸ ಮಾಡುವ ಗುಡಿಸಲಿನ ಆಸ್ತಿಯನ್ನು ಮುತ್ತಯ್ಯರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮುತ್ತಯ್ಯ ಮತ್ತು ಪ್ರತಿವಾದಿ ಸಹೋದರರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ಹಂದಿ ಸಾಕಾಣಿಕೆ ವೃತ್ತಿ ಮಾಡುತ್ತಾರೆ ಎಂದರೆ ಸರಿ. ಸದರಿ ಸ್ವತ್ತು 1985 ರಲ್ಲಿ ಮುತ್ತಯ್ಯರವರಿಗೆ ಸರ್ಕಾರದಿಂದ ಮಂಜೂರಾಗಿತ್ತು, ಸದರಿ ಸ್ವತ್ತನ್ನು ಅವರು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಸದರಿ ಸ್ವತ್ತನ್ನು ಅಂದರೆ 30*40 ಅಡಿಯ ಸ್ವತ್ತನ್ನು ಖರೀದಿ ಮಾಡಿ ಅದರಲ್ಲಿ 25*30 ಅಡಿಗೆ ಗುಡಿಸಲು ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1992 ರಿಂದ ಈವರೆವಿಗೂ ಪ್ರತಿವಾದಿಯು ತನ್ನ ಕುಟುಂಬದವರ ಜೊತೆ ಸದರಿ ಗುಡಿಸಲಿನಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಅವರು ಸದರಿ ವಿಳಾಸಕ್ಕೆ ಸಂಬಂಧಿಸಿದಂತೆ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗುಡಿಸಲಿಗೆ ನೀರಿನ ಸಂಪರ್ಕ ಇರುತ್ತದೆ ಎಂದರೆ ಈಗ ತೆಗೆದಿರುತ್ತಾರೆ. ಪ್ರತಿವಾದಿಯು

ಸದರಿ ನೀರಿನ ಸಂಪರ್ಕಕ್ಕೆ ಬಿಲ್ಲನ್ನು ಗ್ರಾಮ ಪಂಚಾಯಿತಿಗೆ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಯು ಸದರಿ ಗುಡಿಸಲಿಗೆ ವಿದ್ಯುತ್ ಸಂಪರ್ಕ ಪಡೆದಿದ್ದು ಅವರೆ ಬಿಲ್ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ.

ಪ್ರತಿವಾದಿಯು ಹಿಂದುಳಿದ ವರ್ಗಕ್ಕೆ ಸೇರಿರುತ್ತಾರೆ ಎಂದು ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿಯಿಂದ ಶೌಚಾಲಯ ವ್ಯವಸ್ಥೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ಛಾಯಚಿತ್ರದಲ್ಲಿ ಪ್ರತಿವಾದಿಯ ಪತ್ನಿಯ ಭಾವಚಿತ್ರವು ಕಾಣಿಸುತ್ತಿದ್ದು ಅದರಲ್ಲಿ ಶೌಚಾಲಯವನ್ನು 2017-18 ನೇ ಸಾಲಿನಲ್ಲಿ ನಿರ್ಮಾಣ ಮಾಡಿರುವ ಬಗ್ಗೆ ಗೋಡೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ಛಾಯಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಛಾಯಚಿತ್ರದಲ್ಲಿ ಕಾಣುವ ವ್ಯಕ್ತಿಯು ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. ಸದರಿ ಛಾಯಚಿತ್ರದಲ್ಲಿ ಕಾಣುವ ಗುಡಿಸಲಿನಲ್ಲಿ ಪ್ರತಿವಾದಿಯು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಗುಡಿಸಲನ್ನು ಖಾಲಿ ಮಾಡುವಂತೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಛಾಯಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.